

## ವಿಂಟರ್ ಸ್ಕೈ ಓವರ್ ದಿ ಮೌಂಟೇನ್ಸ್

ಚಳಿಗಾಲದಲ್ಲಿ ಗೋಚರಿಸುವ ಮಿಲ್ಕಿ ವೇ ಗ್ಯಾಲಕ್ಸಿ ದುರ್ಬಲವಾಗಿದ್ದರೂ ಸೌಂದರ್ಯದಲ್ಲೇನೂ ಕಡಿಮೆಯಿಲ್ಲ. ಜೊತೆಗೆ ಈ ವಿಭಿನ್ನ ನೋಟವೇ ಆಕರ್ಷಣೆಯ ಕೇಂದ್ರಬಿಂದು. ಈ ನಕ್ಷತ್ರಪುಂಜದ ಭಾಗ ಹಲವು ಪ್ರಕಾಶಮಾನವಾದ ನಕ್ಷತ್ರಗಳನ್ನು ಒಳಗೊಂಡಿದೆ. ಚಳಿಗಾಲದಲ್ಲಿ ಇನ್ನಷ್ಟು ಕಾಂತಿ ಹೊಂದುವಂತೆ ಕಾಣುವ ಈ ನಕ್ಷತ್ರಗಳ ಜಾಡು ಹಿಡಿದು ಹೊರಟವರು ಛಾಯಾಗ್ರಾಹಕ ತೋಮಸ್ ಸ್ಲಾವಿನ್ಸ್ಕಿ. ಸ್ಲೊವಾಕಿಯಾದ ಲೋ ಟಾಟ್ರಾಸ್ ಎಂಬಲ್ಲಿನ ಸುಂದರ ಸಂಜೆಯಲ್ಲಿ 'ವಿಂಟರ್ ಸ್ಕೈ ಓವರ್ ದಿ ಮೌಂಟೇನ್ಸ್' ಸೆರೆಯಾಗಿದೆ.

'ಗ್ಯಾಲಕ್ಸಿ ಎಂಬುದು ಹೈಡ್ರೋಜನ್ ಆಲ್ಫಾ ನೆಬುಲೆಗಳಿಂದ ತುಂಬಿರುತ್ತವೆ. ಸಾಮಾನ್ಯವಾಗಿ ಬರಿಗಣ್ಣಿಗೆ ಗೋಚರಿಸದ ವಸ್ತುಗಳು ಆಸ್ಟ್ರೋ ಮಾಡಿಫೈಯ್ಡ್ ಕ್ಯಾಮೆರಾಗಳಿಗೆ ಕಾಣಿಸುತ್ತವೆ. ಹೈಡ್ರೋಜನ್ ಆಲ್ಫಾಗಳ ಬೆಳಕಿನ ಸೂಕ್ಷ್ಮ ವಿವರಗಳನ್ನು ಸೆರೆಹಿಡಿಯಲು ನಾನು ವಿಶೇಷವಾದ H ಫಿಲ್ಟರ್ ಉಪಯೋಗಿಸಿದೆ' ಎಂದು ತಾಂತ್ರಿಕ ವಿವರಣೆ ಹಂಚಿಕೊಂಡಿದ್ದಾರೆ ತೋಮಸ್.

## ಮರುಭೂಮಿಯಲ್ಲಿ ಬೆಳಕ ಚಿಲುಮೆ

ಚೀನಾದ ಕ್ಸಿನ್‌ಜಿಯಾಂಗ್‌ನಲ್ಲಿ ಛಾಯಾಗ್ರಾಹಕ ಜಿನ್ ಹಿ, 'ಲೈಟ್ನಿಂಗ್ ದಿ ಮಿಲ್ಕಿ ವೇ' ಚಿತ್ರ ಕ್ಲಿಕ್ಕಿಸಿದ್ದಾರೆ. ಜನವಸತಿ ಇರದ ದಹೈಡೋ ಮರುಭೂಮಿಯಲ್ಲಿ ಭೀಕರವಾಗಿ ಬೀಸುವ ಗಾಳಿಯಿಂದಾಗಿ ಈ ಪ್ರದೇಶ ಕ್ರಮೇಣ ಪ್ರತ್ಯೇಕ ಬೆಟ್ಟಗಳಾದಂತೆ ಕಾಣುತ್ತವೆ. ಈ ಮರುಭೂಮಿಯಲ್ಲಿ ಮಿಲ್ಕಿ ವೇ ಹೊರಸೂಸಿದ ಬೆಳಕ ಬಣ್ಣವನ್ನು ಜಿನ್ ಹಿ ತಮ್ಮ ಚಿತ್ರದ ಮೂಲಕ ತೆರೆದಿಟ್ಟಿದ್ದಾರೆ.

'ಆನ್‌ಲೈನ್‌ನಲ್ಲಿ ಸಾಕಷ್ಟು ಸಂಶೋಧನೆ ಮಾಡಿ ಈ ಸ್ಥಳದ ಕುರಿತು ಹೆಚ್ಚಿನ ಮಾಹಿತಿ ಕಲೆ ಹಾಕಿ, ಅಲ್ಲಿ ಈ ಚಿತ್ರ ತೆಗೆದೆ. ಮರುಭೂಮಿಯಲ್ಲಿನ ಛಾಯಾಗ್ರಹಣ ವಿಭಿನ್ನ ಅನುಭವಗಳನ್ನು ದಕ್ಕಿಸಿಕೊಡುತ್ತದೆ' ಎಂದು ಸಂತಸ ವ್ಯಕ್ತಪಡಿಸಿದ್ದಾರೆ ಜಿನ್.







## ಕತ್ತಲ ರಹಸ್ಯ ಕೆದಕಿದ 'ಸೀಕ್ರೆಟ್'

ಸಾವಿರಾರು ವರ್ಷಗಳ ಹಿಂದೆ ಅಮೆರಿಕದ ಪೂರ್ವ ಕ್ಯಾಲಿಫೋರ್ನಿಯಾದ ಈ ಭಾಗದಲ್ಲಿ ನೆಲೆಸಿದ್ದ ಸ್ಥಳೀಯ ಅಮೆರಿಕನ್ನರು ಜ್ವಾಲಾಮುಖಿ ಸ್ಫುರಿಸಿದ ದೊಡ್ಡ ಬಂಡೆಗಳ ಮೇಲೆ ಈ ಶಿಲಾಕೃತಿಗಳನ್ನು ಕೆತ್ತಿದ್ದಾರೆ. ಬಂಡೆಯ ಕಪ್ಪು ಮೇಲ್ಮೈನಲ್ಲಿ ಕೆತ್ತಿದ ಚಿತ್ರಗಳ ಮೇಲೆ ಮಿಲ್ಕಿವೇ ಮೂಡಿಸಿದ ಬೆಳಕು ಚಮತ್ಕಾರದಂತೆ ಗೋಚರಿಸುತ್ತದೆ. 'ಸೀಕ್ರೆಟ್' ಎಂಬ ಹೆಸರಿನ ಈ ಚಿತ್ರ ಕ್ಲಿಕ್ಕಿಸಿದ್ದು ಮಾರ್ಸಿನ್ ಝುಜಕ್. ಕ್ಯಾಲಿಫೋರ್ನಿಯಾ ಸಿಯೆರಾ ನೆವಾಡಾ ಪರ್ವತಗಳು, ರಾತ್ರಿಯ ನೀರವ ಆಕಾಶವನ್ನು ಒಂದೇ ಚೌಕಟ್ಟು, ಕೆತ್ತನೆಗಳು ಒಂದು ಆಸಕ್ತಿದಾಯಕ ಸಂಯೋಜನೆಯಂತೆ ಕಾಣುತ್ತದೆ.